# ಕರ್ನಾಟಕ ಸರ್ಕಾರ

ಸಂ : ಡಿಯುಡಿಸಿ/ಟೆಂಡರ/ಜಿಅಂಗ/ಸಿಆರ್-1/2013-14

ಜಿಲ್ಲಾಧಿಕಾರಿಗಳ ಕಾರ್ಯಾಲಯ,
ಬೀದರ.
ದಿನಾಂಕ: 21.10.2013.

## - : ಅಲ್ಪಾವಧಿ ಟೆಂಡರ್ ಪ್ರಕಟಣೆ : -

2013-14ನೇ ಸಾಲಿಗೆ ಎಂ.ಪಿ.ಲ್ಯಾಡ್/ಎಂ.ಎಲ್.ಎ. ಲ್ಯಾಡ್/ ಎಂ.ಎಲ್.ಸಿ. ಲ್ಯಾಡ್/ ಎಸ್ಎಫ್‌ಸಿ/ ಬಿ.ಆರ್.ಜಿ.ಎಫ್. ಅನುದಾನದಡಿಯಲ್ಲಿ ಬೀದರ ಜಿಲ್ಲೆಯ ವಿಕಲಚೇತನರ ಹಾಗೂ ಹಿರಿಯ ನಾಗರೀಕರ ಫಲಾನುಭವಿಗಳಿಗೆ ಮೋಟರೈಸ್ಡ್ ತ್ರಿಚಕ್ರ ವಾಹನ, ತ್ರಿಚಕ್ರ ಸೈಕಲ್, ವ್ಹೀಲ್ ಚೇರ್, ಕ್ರಚಸ್, ಆಧಾರಕೋಲು, ಬಿಳಿ ಕೋಲು, ಅಂಧರ ಗಡಿಯಾರ ಶ್ರವಣ ಸಾಧನಗಳ ಪೂರೈಕೆಯ ಸಲುವಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಹಾಗೂ KW-1, KW-2, KW-3 ಮತ್ತು KW-4ರ ಗಳಂತೆ ನೊಂದಾಯಿತ ಅಧಿಕೃತ ಸರಬರಾಜುದಾರರಿಂದ ಒದಗಿಸಲು ವಿವಿಧ ಮಾದರಿಯ ಸಾಧನ ಸಲಕರಣೆಗಳ ಐಟಂ ರೇಟ್ ದರಗಳ ಗುತ್ತಿಗೆ ಮೇರೆಗೆ ದ್ವಿ-ಲಕೋಟೆ ಟೆಂಡರನ್ನು ದ್ವಿ-ಪ್ರತಿಗಳಲ್ಲಿ ಆಹ್ವಾನಿಸಲಾಗಿದೆ. ಟೆಂಡರಗಳನ್ನು ಕಚೇರಿ ಸಮಯದಲ್ಲಿ ನಿಗಧಿಪಡಿಸಿದ ದಿನಾಂಕ ಮತ್ತು ಸಮಯದಲ್ಲಿ ಸರಬರಾಜುದಾರರು ಖುದ್ದಾಗಿ ಇಲ್ಲವೆ ಅವರ ಪ್ರತಿನಿಧಿಗಳ ಮುಖಾಂತರ ಪಡೆದು ಸಲ್ಲಿಸಬಹುದು.

1. ಟೆಂಡರ್ ನಮೂನೆಗಳನ್ನು ಪಡೆಯಲು ಕೊನೆಯ ದಿನಾಂಕ : 06.11.2013
   ಸಾಯಂಕಾಲ 5:30 ಗಂಟೆಗೆ.
2. ಭರ್ತಿ ಮಾಡಿದ ಟೆಂಡರ್ ಲಕೋಟೆಗಳನ್ನು ಸಲ್ಲಿಸುವ ಕೊನೆಯ ದಿನಾಂಕ : 07.11.2013
   ಸಾಯಂಕಾಲ 5:00 ಗಂಟೆಗೆ
3. ಸೀಲ್ಡ್ ಟೆಂಡರ ಲಕೋಟೆಗಳನ್ನು ತೆರೆಯುವ ದಿನಾಂಕ : 08.11.2013
   ಸಾಯಂಕಾಲ 4:30 ಗಂಟೆಗೆ

| ಕ್ರ. ಸಂ | ಸಾಧನ ಸಲಕರಣೆಗಳು | ಸಂಖ್ಯೆ | ಇ.ಎಂ.ಡಿ. (ರೂಪಾಯಿಗಳಲ್ಲಿ) | ಟೆಂಡರ್ ಡಾಕುಮೆಂಟ್ಸ್ ಬೆಲೆ (ರೂಪಾಯಿಗಳಲ್ಲಿ) | ಸರಬರಾಜು ಮಾಡಲು ನಿಗದಿ ಪಡಿಸಿದ ಅವಧಿ |
|---|---|---|---|---|---|
| 1 | 2 | 3 | 4 | 5 | 6 |
| 1 | ಮೋಟರೈಸ್ಡ್ ತ್ರಿಚಕ್ರ ವಾಹನ | 1 | 50000/- | 1000/- + ತೆರಿಗೆ | ಗುತ್ತಿಗೆ ಕರಾರು ಒಪ್ಪಂದ ಹಾಗೂ ಕಾರ್ಯದೇಶದಲ್ಲಿ ನಮೂದಿಸಲಾಗುವುದು. |
| 2 | ತ್ರಿಚಕ್ರ ಸೈಕಲ್ | 1 | | | |
| 3 | ವ್ಹೀಲ್ ಚೇರ್ | 1 | | | |
| 4 | ಕ್ರಚಸ್ | 1 | | | |
| 5 | ಆಧಾರಕೋಲು | 1 | | | |
| 6 | ಬಿಳಿ ಕೋಲು | 1 | | | |
| 7 | ಅಂಧರ ಗಡಿಯಾರ | 1 | | | |
| 8 | ಶ್ರವಣ ಸಾಧನಗಳ | 1 | | | |
| | i. ಸಾಧಾರಣ | 1 | | | |
| | ii. ತೀವ್ರ | 1 | | | |
| | iii. ಅತೀ ತೀವ್ರ | 1 | | | |

**ಷರತ್ತುಗಳು :-**

1. ಸರಬರಾಜುದಾರರು ನೋಂದಾಣಿಯ ಪ್ರತಿ, ಅಧಿಕೃತ ಪರವಾನಿಗೆ ಪತ್ರ, ವ್ಯಾಟ್ ಸಂಖ್ಯೆ, ಸಿ.ಎಸ್.ಟಿ. ಸಂಖ್ಯೆ ಮತ್ತು ಟಿನ್ ಸಂಖ್ಯೆಗಳ ಪ್ರಮಾಣ ಪತ್ರಗಳನ್ನು ಲಗತ್ತಿಸತಕ್ಕದ್ದು.
2. ಸರಬರಾಜುದಾರರ ಕಳೆದ ಎರಡು ವರ್ಷಗಳ ನಿವ್ವಳ ಆದಾಯದ (ಟರ್ನ್ ಓವರ್) ಪ್ರಮಾಣ ಪತ್ರ ಸಲ್ಲಿಸತಕ್ಕದು.
3. ಸರಬರಾಜುದಾರರು ಚಾರ್ಟೆಡ್ ಅಕೌಂಟೆಂಟ ರವರಿಂದ ತಯಾರಿಸಿದ ಕಳೆದೆರಡು ವರ್ಷಗಳ ಆದಾಯ ವರಮಾನ ಪ್ರಮಾಣ ಪತ್ರ ಸಲ್ಲಿಸತಕ್ಕದು.
4. ನೊಂದಾಯಿತ ಸರಬರಾಜುದಾರರು ಮಾತ್ರ ಟೆಂಡರ ಬೇಡಿಕೆ ಸಲ್ಲಿಸತಕ್ಕದು. ಟೆಂಡರ್ ದಾಖಲೆಗಳನ್ನು ವರ್ಗಾಯಿಸತಕ್ಕದ್ದಲ್ಲ.
5. ಕಛೇರಿಯಿಂದ ಅಧೀಕೃತವಾಗಿ ಜಾರಿಮಾಡಲಾದ ಟೆಂಡರ್ ಫಾರಂಗಳಲ್ಲಿ ಮಾತ್ರ ಟೆಂಡರ್‌ಗಳನ್ನು ಸಲ್ಲಿಸತಕ್ಕದ್ದು. ಝೆರಾಕ್ಸ್ ಮಾಡಿದ ಅಥವಾ ಇತರೆ ಅನ್ಯ ಮೂಲಗಳಿಂದ ಪಡೆದ ಅರ್ಜಿಗಳನ್ನು ತಿರಸ್ಕರಿಸಲಾಗುವುದು.
6. ಸೀಲ್ ಮಾಡದೇ ಇರುವ ಟೆಂಡರ್ ಲಕೋಟೆಯನ್ನು ಹಾಗೂ ಅವಧಿ ಮೀರಿ ಬಂದ ಟೆಂಡರ್‌ಗಳನ್ನು ಸ್ವೀಕರಿಸುವುದಿಲ್ಲ.
7. ಸರಬರಾಜುದಾರರು ಟೆಂಡರ್ ನಮೂನೆಗಳಲ್ಲಿ ಕೇಳಿರುವ ಮಾಹಿತಿಗಳನ್ನು ಪೂರ್ಣವಾಗಿ ನೀಡತಕ್ಕದ್ದು ಹಾಗೂ ದರವನ್ನು ಅಂಕಿಯಲ್ಲಿ ಮತ್ತು ಅಕ್ಷರಗಳಲ್ಲಿ ಸ್ಪಷ್ಟವಾಗಿ ಬರೆಯತಕ್ಕದ್ದು.
8. ಸಾಧನ ಸಲಕರಣಗಳ ಸಾಗಾಣಿಕ ವೆಚ್ಚ, ತೆರಿಗೆ ಹಾಗೂ ಇತರೆ ವೆಚ್ಚಗಳನ್ನು ಒಳಗೊಂಡತೆ ಸರಬರಾಜು ಮಾಡಲು ದರವನ್ನು ನಮೂದಿಸತಕ್ಕದ್ದು.
9. ಸಾಧನ ಸಲಕರಣೆಗಳಿಗೆ ಬೇಕಾಗಿರುವ ಇ.ಎಂ.ಡಿ. ಮೊತ್ತ ಮತ್ತು ಅರ್ಜಿ ಶುಲ್ಕವನ್ನು ರಾಷ್ಟ್ರೀಕೃತ ಬ್ಯಾಂಕಿನಿಂದ ಡಿ.ಡಿ. ತೆಗೆದು Deputy Commissioner Bidar ರವರ ಹೆಸರಿನಲ್ಲಿ ಕಡ್ಡಾಯವಾಗಿ ಪಡೆದು ಭರ್ತಿ ಮಾಡಿ ಸಲ್ಲಿಸಲಾಗುವ ಟೆಂಡರ ಲಕೋಟೆ ಜೊತೆಗೆ ಕೊಡತಕ್ಕದು.

ಪುಟ 2ಕ್ಕೆ ...